**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.572/2024**

| | | |
|---|---|---|
| ಸಾಕ್ಷಿದಾರರ ಹೆಸರು | : ರೇವಣ್ಣ ಸಿದ್ದಪ್ಪ | ಪ್ರಾಸಾ-3 |
| ತಂದೆಯ ಹೆಸರು | : ಶಿವಪ್ಪ | ಚಾಸಾ-2 |
| ವಯಸ್ಸು | : 62 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಂಚೆ ಜಾರಿಕ | ದಿನಾಂಕಃ 01.09.2025 |
| ವಾಸಸ್ಥಳ | : ಕುದುರೆಮುಖ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಚಾಸಾ-1 ರವರ ಮುಖಪರಿಚಯ ನನಗಿದೆ. ಚಾಸಾ-3 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ನಿಪಿ-3 ರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಲು ನಿರಾಕರಿಸಿರುತ್ತಾರೆ.

1 ವರ್ಷದ ಒಳಗೆ ನಾನು ಅಂಚೆಯ ಪತ್ರವನ್ನು ಜಾರಿ ಮಾಡಲು ಹೋದ ಸಂದರ್ಭದಲ್ಲಿ ಕುದುರೆಮುಖ ಪೋಲಿಸ್ ಠಾಣೆಯಲ್ಲಿ ನಿಪಿ-3 ಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಿಪಿ-4 ಮತ್ತು 5 ನ್ನು ಎಲ್ಲಿ ತೆಗೆಯಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಅಂಚೆಯನ್ನು ಜಾರಿ ಮಾಡುವ ಕುರಿತು ಮಾಹಿತಿಯನ್ನು ಬರೆಯಲಾಗಿರುತ್ತದೆ ಎಂದು ತಿಳಿಸಿ ನಿಪಿ-3 ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ-3 ನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ ಮತ್ತು ಪೋಲಿಸರು ನನಗೆ ಓದಿ ತಿಳಿಸಿರುವುದಿಲ್ಲ. ನಾನು ನಿಪಿ-3 ಕ್ಕೆ ಮ.1.00 ರ ಸಮಯಕ್ಕೆ ಸಹಿ ಮಾಡಿರುತ್ತೇನೆ. ನನ್ನೊಟ್ಟಿಗೆ ಇತರರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಇದನ್ನು ಹೊರತುಪಡಿಸಿ ನನಗೆ ಇತರೆ ಯಾವುದೇ ವಿಷಯದ ಬಗ್ಗೆ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಕುದುರೆಮುಖದ 5 ನೇ ಸೆಕ್ಟರ್ ನಲ್ಲಿಯೇ ನಾನು ವಾಸವಾಗಿರುತ್ತೇನೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿಯೇ ಚಾಸಾ-1 ರವರು ವಾಸಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ದಿ.21.10.2023 ರಂದು ಪೋಲಿಸರು ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದ್ದ ಬಾಬ್ತು ಮಹಜರ್ ಕ್ರಮಕ್ಕೆ ಬಂದ ಸಮಯಕ್ಕೆ ನಾನು ನಿಪಿ-3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನ್ನೊಟ್ಟಿಗೆ ಚಾಸಾ-3 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ

ಸಮಯದಲ್ಲಿ ನಿಪಿ-4 ಮತ್ತು 5 ರಂತೆ ಪೋಟೋವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು 10 ನೇ ತರಗತಿಯ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕಳೆದ 42 ವರ್ಷದಿಂದ ಅಂಚೆ ಜಾರಿಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸಾಮಾನ್ಯವಾಗಿ ಒಂದು ದಾಖಲಾತಿಗೆ ಸಹಿ ಮಾಡುವ ಪೂರ್ವದಲ್ಲಿ ಅದನ್ನು ಓದಿ ತಿಳಿದುಕೊಂಡಿರಬೇಕು ಎನ್ನುವುದರ ಬಗ್ಗೆ ತಿಳಿದಿರುತ್ತದೆ ಎಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.572/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸಂಜಯ್ | ಪ್ರಾಸಾ-4 |
| ತಂದೆಯ ಹೆಸರು | : ರಮೇಶ್ | ಚಾಸಾ-4 |
| ವಯಸ್ಸು | : 31 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವೆಲ್ಡರ್ | ದಿನಾಂಕಃ 01.09.2025 |
| ವಾಸಸ್ಥಳ | : ಬೆಳ್ತಂಗಡಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. 2 ನೇ ಆರೋಪಿಯ ಪರಿಚಯ ನನಗಿದೆ. ಚಾಸಾ-5 ರವರ ಪರಿಚಯ ನನಗಿದೆ.

ಸಾಕ್ಷಿಯು ಅಮಾನತು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಅಮಾನತು ಮಹಜರ್ ನ್ನು ನಿಪಿ-14 ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ನಿಪಿ-11 ರಿಂದ 13 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿರುತ್ತಾರೆ. ಸಾಕ್ಷಿಯು 3 ಫೋಟೋಗಳನ್ನು ನೋಡಿ ಅದರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-15 ರಿಂದ 17 ಎಂದು ಗುರುತಿಸಲಾಯಿತು. ನಿಪಿ-12 ಮತ್ತು 13 ರಲ್ಲಿ ಕಂಡುಬರುವ ಒಡವೆಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಟ್ಟಿಂಗ್ ಪ್ಲೇರ್ ಮತ್ತು ಹಾರೇಕೋಲನ್ನು ಈ ಹಿಂದೆ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಕಳೆದ 1 ವರ್ಷದ ಹಿಂದೆ ಕುದುರೆಮುಖ ಪೋಲಿಸ್ ಠಾಣೆಯಲ್ಲಿ ನಾನು ನಿಪಿ-14 ಕ್ಕೆ ಸಹಿ ಮಾಡಿರುತ್ತೇನೆ. ನಾನು ಆ ದಿನ ಕೆಲಸಕ್ಕೆಂದು ಹೊರಟ್ಟಿದ್ದ ಸಮಯದಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ನಿಪಿ-14 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಯಾವ ವಿಚಾರದ ಕುರಿತು ಪಡೆದುಕೊಳ್ಳಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ನಿಪಿ-14 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಮತ್ತು ಪೋಲಿಸರು ಓದಿ ತಿಳಿಸಿರುವುದಿಲ್ಲ. ನಿಪಿ-11 ರಿಂದ 13 ಮತ್ತು 15 ರಿಂದ 17 ನ್ನು ಠಾಣೆಯಲ್ಲಿ ತೆಗೆದಿರುವ ನೆನಪನ್ನು ಹೊರತು ಪಡಿಸಿ ಇತರ ಯಾವುದೇ ವಿಷಯ ತಿಳಿದಿರುವುದಿಲ್ಲ. ಆ ದಿನ ನ್ಯಾಯಾಲಯದ ಮುಂದಿರುವ ಆರೋಪಿಯ ಹಾಜರಿರುವುದಿಲ್ಲ. ನಾನು ಸಹಿ ಮಾಡಿದ ಸಮಯ ನೆನಪಿರವುದಿಲ್ಲ ಆದರೆ ಬೆಳಗಿನ ಸಮಯವಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.01.12.2023 ರಂದು ಕುದುರೆಮುಖದ ಪೋಲಿಸರು ಈ ಪ್ರಕರಣದ 1 ಮತ್ತು 2 ನೇ ಆರೋಪಿಗಳು ಕೆಲವು ಸ್ಥಳಗಳನ್ನು ತೋರಿಸುತ್ತಾರೆ ಸದರಿ ಸ್ಥಳದ ಮಹಜರ್ ಗಾಗಿ ನನ್ನನ್ನು ಕರೆಯಾಲಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ನನ್ನನ್ನು ಪೋಲಿಸರು ಮೊದಲಿಗೆ ಕುದುರೆಮುಖದ 5 ನೇ ಸೆಕ್ಟರ್ ನಲ್ಲಿರುವ ಚಾಸಾ-1 ರವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ ನಂತರ 1 ಮತ್ತು 2 ನೇ ಆರೋಪಿಗಳು ಸದರಿ ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿಯು ತಾನು ಕಳ್ಳತನಕ್ಕೆ ಬಳಸಿದ್ದ ಹಾರೇಕೋಲು ಮತ್ತು ಕಟ್ಟಿಂಗ್ ಪ್ಲೇಯರ್ ನ್ನು ಬದ್ರಾ ನದಿಗೆ ಎಸೆದಿರುವುದಾಗಿ ತಿಳಿಸಿ ಅದನ್ನು ಭದ್ರಾ ನದಿ ದಂಡೆಯ ಬಳಿ ಎಸೆದಿದ್ದ ಹಾರೇಕೋಲು ಮತ್ತು ಕಟ್ಟಿಂಗ್ ಪ್ಲೇಯರ್ ನ್ನು ನನ್ನ ಸಮಕ್ಷಮ ಪೋಲಿಸರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ 2 ನೇ ಆರೋಪಿಯು ತಾವುಗಳು ಕಳ್ಳತನ ಮಾಡಿದ ವಸ್ತುಗಳನ್ನು ವಿನೋಭ ನಗರದಲ್ಲಿರುವ 2 ನೇ ಆರೋಪಿಯ ಮನೆಯ ಮಂಚದ ಕೆಳಗಿರುವ ಟ್ರಂಕ್ ನಲ್ಲಿ ಇರಿಸಿರುವುದಾಗಿ ತಿಳಿಸಿ ಸದರಿ ವಸ್ತುಗಳನ್ನು ಪೋಲಿಸರಿಗೆ ಹಸ್ತಾಂತರಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಸಮಯದಲ್ಲಿ 1 ನೇ ಆರೋಪಿಯು ಚಿನ್ನದ ಕೊರಳು ಚೈನ್, 4 ಬಂಗಾರದ ನಾಣ್ಯ, 5 ಬೆಳ್ಳಿ ನಾಣ್ಯ, ಒಂದು ಸಣ್ಣ ತಾಳಿ, ರೂ.500/- ರ ಮುಖಬೆಲೆಯ 36 ನೋಟುಗಳ ಒಟ್ಟು ರೂ.18,000/- ನಗದನ್ನು ನನ್ನ ಸಮಕ್ಷಮ ಪೋಲಿಸರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನ್ನ ಸಮಕ್ಷಮ 10.30 ರಿಂದ 11.30 ರ ಸಮಯದವರೆಗೂ ಅಮಾನತು ಮಹಜರ್ ನ್ನು ಬರವಣಿಗೆ ಮಾಡಲಾಗಿರುತ್ತದೆ ಮತ್ತು ನಾವು ಅದಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಅದರಲ್ಲಿ ಏನು ಬರವಣಿಗೆ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಆದರೆ ಸಹಿಯನ್ನು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ ಆದರೆ ಸಹಿ ಮಾಡಿದ ನಂತರ ನಾವು ಕೆಲಸಕ್ಕೆ ಹೋಗಿರುತ್ತೇವೆ. ನಿಪಿ-14 ರಲ್ಲಿ ಏನನ್ನು ಬರವಣಿಗೆ ಮಾಡಲಾಗಿರುತ್ತದೆ ಎಂಬುದರೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ**

ನಿಪಿ-15 ರಿಂದ 17 ನ್ನು ಯಾವ ವಿಷಯದ ಕುರಿತು ತೆಗೆಯಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.572/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಅನಿಲ್ ಕುಮಾರ್ | ಪ್ರಾಸಾ-5 |
| ತಂದೆಯ ಹೆಸರು | : ಮಣಿವೇಲು | ಚಾಸಾ-5 |
| ವಯಸ್ಸು | : 34 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 01.09.2025 |
| ವಾಸಸ್ಥಳ | : ಕುದುರೆಮುಖ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಮತ್ತು 2 ನೇ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-4 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-14 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ನಿಪಿ-11 ರಿಂದ 13 ರಲ್ಲಿ ಕಂಡುಬರು ವಸ್ತುಗಳನ್ನು ಮತ್ತು ನ್ಯಾಯಾಲಯದ ಮುಂದಿರುವ ಕಟ್ಟಿಂಗ್ ಪ್ಲೇರ್ ಮತ್ತು ಹಾರೇಕೋಲನ್ನು ಈ ಹಿಂದೆ ನಾನು ನೋಡಿರುವುದಿಲ್ಲ.

ಕೆಲವು ದಿನಗಳ ಹಿಂದೆ ಕುದುರೆಮುಖ ಪೋಲಿಸ್ ಠಾಣೆಯಲ್ಲಿ ನಾನು ಪೋಲಿಸರು ಕೋರಿಕೆಯ ಮೇರೆಗೆ ನಿಪಿ-14 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ನಿಪಿ-14 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಮತ್ತು ಪೋಲಿಸರು ಓದಿ ತಿಳಿಸಿರುವುದಿಲ್ಲ. ನಿಪಿ-11 ರಿಂದ 13 ಮತ್ತು 15 ರಿಂದ 17 ನ್ನು ಯಾವ ಸ್ಥಳದಲ್ಲಿ ತೆಗೆಯಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಇದನ್ನು ಹೊರತು ಪಡಿಸಿ ಇನ್ಯಾವುದೇ ವಿಷಯ ನನಗೆ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.01.12.2023 ರಂದು ಕುದುರೆಮುಖದ ಪೋಲಿಸರು ಈ ಪ್ರಕರಣದ 1 ಮತ್ತು 2 ನೇ ಆರೋಪಿಗಳು ಕೆಲವು ಸ್ಥಳಗಳನ್ನು ತೋರಿಸುತ್ತಾರೆ ಸದರಿ ಸ್ಥಳದ ಮಹಜರ್ ಗಾಗಿ ನನ್ನನ್ನು ಕರೆಯಾಲಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ನನ್ನನ್ನು ಪೋಲಿಸರು ಮೊದಲಿಗೆ ಕುದುರೆಮುಖದ 5 ನೇ ಸೆಕ್ಟರ್ ನಲ್ಲಿರುವ ಚಾಸಾ-1 ರವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ ನಂತರ 1 ಮತ್ತು 2 ನೇ ಆರೋಪಿಗಳು ಸದರಿ ಮನೆಯಲ್ಲಿ ಕಳ್ಳತನ

ಮಾಡಿರುವುದಾಗಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿಯು ತಾನು ಕಳ್ಳತನಕ್ಕೆ ಬಳಸಿದ್ದ ಹಾರೇಕೋಲು ಮತ್ತು ಕಟ್ಟಿಂಗ್ ಪ್ಲೇಯರ್ ನ್ನು ಭದ್ರಾ ನದಿಗೆ ಎಸೆದಿರುವುದಾಗಿ ತಿಳಿಸಿ ಅದನ್ನು ಭದ್ರಾ ನದಿ ದಂಡೆಯ ಬಳಿ ಎಸೆದಿದ್ದ ಹಾರೇಕೋಲು ಮತ್ತು ಕಟ್ಟಿಂಗ್ ಪ್ಲೇಯರ್ ನ್ನು ನನ್ನ ಸಮಕ್ಷಮ ಪೋಲಿಸರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ 2 ನೇ ಆರೋಪಿಯು ತಾವುಗಳು ಕಳ್ಳತನ ಮಾಡಿದ ವಸ್ತುಗಳನ್ನು ವಿನೋಭ ನಗರದಲ್ಲಿರುವ 2 ನೇ ಆರೋಪಿಯ ಮನೆಯ ಮಂಚದ ಕೆಳಗಿರುವ ಟ್ರಂಕ್ ನಲ್ಲಿ ಇರಿಸಿರುವುದಾಗಿ ತಿಳಿಸಿ ಸದರಿ ವಸ್ತುಗಳನ್ನು ಪೋಲಿಸರಿಗೆ ಹಸ್ತಾಂತರಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಸಮಯದಲ್ಲಿ 1 ನೇ ಆರೋಪಿಯು ಚಿನ್ನದ ಕೊರಳು ಚೈನ್, 4 ಬಂಗಾರದ ನಾಣ್ಯ, 5 ಬೆಳ್ಳಿ ನಾಣ್ಯ, ಒಂದು ಸಣ್ಣ ತಾಳಿ, ರೂ.500/- ರ ಮುಖಬೆಲೆಯ 36 ನೋಟುಗಳ ಒಟ್ಟು ರೂ.18,000/- ನಗದನ್ನು ನನ್ನ ಸಮಕ್ಷಮ ಪೋಲಿಸರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನ್ನ ಸಮಕ್ಷಮ 10.30 ರಿಂದ 11.30 ರ ಸಮಯದವರೆಗೂ ಅಮಾನತು ಮಹಜರ್ ನ್ನು ಬರವಣಿಗೆ ಮಾಡಲಾಗಿರುತ್ತದೆ ಮತ್ತು ನಾವು ಅದಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಅದರಲ್ಲಿ ಏನು ಬರವಣಿಗೆ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಆದರೆ ಸಹಿಯನ್ನು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಪೋಟೋಗಳನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ ಆದರೆ ಸಹಿ ಮಾಡಿದ ನಂತರ ನಾವು ಕೆಲಸಕ್ಕೆ ಹೋಗಿರುತ್ತೇವೆ. ನಿಪಿ-14 ರಲ್ಲಿ ಏನನ್ನು ಬರವಣಿಗೆ ಮಾಡಲಾಗಿರುತ್ತದೆ ಎಂಬುದರೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ</u>**

ನಿಪಿ-15 ರಿಂದ 17 ನ್ನು ಯಾವ ವಿಷಯದ ಕುರಿತು ತೆಗೆಯಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.